

ಕ್ಯಾಪ್ಟನ್ ಜೇಮ್ಸ್ ಕುಕ್‌ನ ಕುಟೀರ

ಶತಮಾನೋತ್ಸವದ ನೆನಪಿಗಾಗಿ 1934ರಲ್ಲಿ ಕುಟೀರವನ್ನು ಬ್ರಿಟನ್ನಿನಿಂದ ಸಾಗಿಸಿ, ಇಲ್ಲಿಗೆ ತಂದು ವಿಶಾಲವಾದ ಪಾರ್ಕ್‌ನಲ್ಲಿ ಮರುಜೋಡಣೆ ಮಾಡಿದರು. ಕುಟೀರದಲ್ಲಿ ಅಡುಗೆಮನೆ, ಮಲಗುವಮನೆ, ಲಿವಿಂಗ್‌ರೂಮ್ ಇದ್ದು, ಕುಕ್ ಕುಟುಂಬ ಬಳಸುತ್ತಿದ್ದ ವಸ್ತು– ಪೀಠೋಪಕರಣಗಳನ್ನೆಲ್ಲಾ ಓರಣವಾಗಿ ಇಡಲಾಗಿದೆ. ಆಗಿನ ಕಾಲದ ನಾವಿಕರಲ್ಲಿ 'ವಿಟಮಿನ್ ಸಿ' ಕೊರತೆಯಿಂದ ಉಂಟಾಗುತ್ತಿದ್ದ 'ಸ್ಕರ್ವಿಗ್ರಾಸ್' ಅನ್ನು ಕಾಟೇಜ್ ಆವರಣ ದಲ್ಲಿ ಬೆಳೆಸಲಾಗಿದೆ. ಕುಕ್‌ನ ನಿಲುವಂಗಿಯ ಜೊತೆಗೆ ವಿಗ್ ಧರಿಸಿ, ಫೋಟೊ ತೆಗೆಸಿಕೊಂಡು ಸಂಭ್ರಮಪಡಬಹುದು.

## ಸ್ಮರಣೀಯ ದೇವಾಲಯ

ಮನುಷ್ಯಕುಲದ ದೊಡ್ಡ ದುರಂತಗಳಲ್ಲಿ ಒಂದಾದ ಪ್ರಥಮ ಮಹಾಯುದ್ಧದಲ್ಲಿ ವಿಕ್ಟೋರಿಯಾ ಪ್ರಾಂತದ 11,400 ಜನ ಭಾಗವಹಿಸಿದ್ದರು. ಯಾರದೋ ಪ್ರತಿಷ್ಠೆಗೆ ಸಾವುನೋವನ್ನು ಅನುಭವಿಸಿದರು. ಇವರ ನೆನಪಿಗಾಗಿ ಈ ಸುಂದರ ದೇವಾಲಯವನ್ನು 1928ರಿಂದ 1934ರ ನಡುವೆ ನಿರ್ಮಿಸಲಾಯಿತು. ಪ್ರಾಚೀನ ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದಾದ ಮೌಸೋಲಸ್ ರಾಜನ ಗೋರಿಯನ್ನು ಹೋಲುವ ಈ ಕಟ್ಟಡವನ್ನು ಹಡ್ಸನ್ ಮತ್ತು ವಾರ್‌ಡ್ರಾಪ್ ಎಂಬ ಸೈನಿಕರು ರೂಪಿಸಿದರು. ಇಲ್ಲಿ ನಿರಂತರವಾಗಿ ಉರಿಯುತ್ತಿರುವ ಜ್ಯೋತಿಯು ಅಸ್ಟ್ರೇಲಿಯಾ ದೇಶಕ್ಕೆ ಜೀವತೆತ್ತು ಸೇವೆಸಲ್ಲಿಸಿದ ಎಲ್ಲ ವ್ಯಕ್ತಿಗಳನ್ನು ಸ್ಮರಿಸುತ್ತದೆ. ಸಿಂಹದ ಜೋಡಿಗಳು ಎಳೆಯುತ್ತಿರುವ ರಥಶಿಲ್ಪಗಳು ನೋಡುಗರನ್ನು ಸಂತುಷ್ಟಗೊಳಿಸುತ್ತವೆ.

## ಎಂ.ಸಿ.ಜಿ. ಮೆಲ್ಬರ್ನ್ ಕ್ರಿಕೆಟ್ ಗ್ರೌಂಡ್ಸ್

ಈ ಐತಿಹಾಸಿಕ ಕ್ರಿಕೆಟ್ ಸ್ಟೇಡಿಯಂ, ಆಸ್ಟ್ರೇಲಿಯಾದ 150 ವರ್ಷಗಳ ಕ್ರೀಡಾ ಜಗತ್ತನ್ನು ನಮ್ಮ ಮುಂದೆ ತೆರೆದಿಡುತ್ತದೆ. 2,500ಕ್ಕೂ ಹೆಚ್ಚಿನ ಕ್ರೀಡಾವಸ್ತುಗಳನ್ನು ಪ್ರದರ್ಶಿಸುತ್ತಾ, ವೀಕ್ಷಕರನ್ನು ತನ್ನದೇ ಲೋಕಕ್ಕೆ ಕರೆದೊಯ್ಯುತ್ತದೆ. ಕ್ರಿಕೆಟ್ ಲೋಕದ ದಂತಕಥೆಗಳಾದ ಬ್ರಾಡ್ಮನ್ ಹಾಗೂ ಡೇವಿಸ್ ಲಿಲ್ಲಿಯ ಪುತ್ಥಳಿಗಳನ್ನು ಕಾಣಬಹುದಾಗಿದೆ. ಕ್ರಿಕೆಟ್ ದೇವರು ಸಚಿನ್ ತಂಡೂಲ್ಕರ್ ಮತ್ತು ಬ್ರಾಡ್ಮನ್ ಒಟ್ಟಿಗೆ ಇರುವ ಚಿತ್ರವೂ ಇದೆ. ಒಂದು ಕ್ರೀಡಾಂಗಣವನ್ನು ಪ್ರವಾಸಿಸ್ಥಳವನ್ನಾಗಿ ರೂಪಿಸಿರುವ ಬಗೆಯನ್ನು ಆಸ್ಟ್ರೇಲಿಯದವರಿಂದ ಕಲಿತುಕೊಳ್ಳಬೇಕು ಎಂದು ಅನಿಸಿದ್ದಂತೂ ನಿಜ.

## ಪುಟ್ಟ ಪೆಂಗ್ವಿನ್‌ಗಳ ಪರೇಡ್

ಪೆಂಗ್ವಿನ್ ಒಂದು ವಿಶಿಷ್ಟ ಪಕ್ಷಿ. ಮನುಷ್ಯರಂತೆ ನಡೆಯುವ, ನೀರಿನಲ್ಲಿ ಈಜುವ ಆದರೆ ಆಗಸದಲ್ಲಿ ಹಾರಲಾಗದ ಈ ಪಕ್ಷಿಗಳ ಸಮುದಾಯ ನಡಿಗೆಯೇ ಮುದ್ದು ಉಕ್ಕಿಸುವ ಹಾಗಿರುತ್ತದೆ. ಮೆಲ್ಬರ್ನ್ ಬಳಿ ಇರುವ ಫಿಲಿಪ್ ದ್ವೀಪದಲ್ಲಿ ಪ್ರಪಂಚದ ಅತಿ ಪುಟ್ಟ ಪೆಂಗ್ವಿನ್‌ಗಳು ಮನೆ ಮಾಡಿ ಕೊಂಡಿವೆ. ಹಗಲಿನಲ್ಲಿ ಸಮುದ್ರದಲ್ಲಿದ್ದು, ಸೂರ್ಯ ಮುಳುಗುತ್ತಿದ್ದಂತೆ, ದಂಡೆಗೆ ವಾಪಸ್ ಬಂದು ತಮ್ಮ ಮರಳ ಗೂಡಿಗೆ ಒಟ್ಟಾಗಿ, ಒಂದರ ಹಿಂದೆ ಒಂದರಂತೆ ನಡೆಯುವ ಈ ನೈಸರ್ಗಿಕ ಪೆರೇಡ್ ವಿಶ್ವವಿಖ್ಯಾತವಾಗಿದೆ.

ಅಂದು ನಮ್ಮ ಜತೆಗೆ ನೂರಾರು ಸಂಖ್ಯೆಯಲ್ಲಿ ಜನ ಜಮಾಯಿಸಿ, ಅಟ್ಟಣಿಗೆಗಳಲ್ಲಿ ಪೆಂಗ್ವಿನ್– ಪರೇಡ್ ನೋಡುವ ನಿರೀಕ್ಷೆಯಲ್ಲಿ ಕುಳಿತರು. ಸೂರ್ಯ ಮುಳುಗಿದ. ಕತ್ತಲಾಯಿತು. ಪರೇಡ್ ನಡೆಯಲೇ ಇಲ್ಲ! ಕೆಲವು ಪೆಂಗ್ವಿನ್‌ಗಳು ತಮ್ಮ ಪಾಡಿಗೆ ನಡೆದು ಗೂಡುಸೇರಿಕೊಂಡವು. ಈ ದಿನ ಪರೇಡ್ ಬೇಡ ಎಂದು ಅವು ಏಕೆ ನಿರ್ಧರಿಸಿದವೋ ನಮಗೆ ಗೊತ್ತಾಗಲಿಲ್ಲ. ಗೂಡುಗಳ ಬಳಿ ಹೋಗಿ, ಅವನ್ನು ಕಂಡು ತೃಪ್ತಿಪಟ್ಟೆವು. ಒಂದು ಪೆಂಗ್ವಿನ್ ಗೊಂಬೆಯನ್ನು ನೆನಪಿನ ಕಾಣಿಕೆಯಾಗಿ ಪಡೆದೆವು.

## ಹನ್ನೆರಡು ದೇವಗುಡ್ಡಗಳು!

ಮೆಲ್ಬರ್ನ್‌ನಿಂದ– ಅಪೋಲೋ ಬೇ ಮುಖಾಂತರ, ಪೋರ್ಟ್ ಕಾಂಬೆಲ್‌ವರೆಗೆ ಇರುವ ರಸ್ತೆಯೇ 'ಗ್ರೇಟ್ ಓಶನ್ ರಸ್ತೆ'. ಪ್ರಥಮ